ಆ) ಎಲ್ಲಾ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ವಾದಿಸಲು ಸರ್ಕಾರಿ ವಕೀಲರನ್ನು ಅಧಿಕರಿಸಲಾಗುತ್ತಿದೆ, ಕಂಡಿಕೆವಾರು ಷರಾಗಳನ್ನು ಒದಗಿಸಲಾಗುತ್ತಿದೆ ಹಾಗೂ ಪ್ರಕರಣಗಳಲ್ಲಿ ನ್ಯಾಯಾಲಯ ನೀಡುವ ಅಂತಿಮ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ವಾಣಿಜ್ಯ ಅಬಕಾರಿ ಹಾಗೂ ಮುದ್ರಾಂಕದಿಂದ ಆದಾಯದ ಗುರಿ

24 (192); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ಪ್ರಸ್ತುತ ವರ್ಷ ವಾಣಿಜ್ಯ, ಅಬಕಾರಿ ಹಾಗೂ ಮುದ್ರಾಂಕದಿಂದ ಪ್ರತ್ಯೇಕ ಆದಾಯದ ಗುರಿಗಳೆಷ್ಟು; ನಿಗದಿಪಡಿಸಲಾಗಿದೆಯೇ:

ಆ) ಡಿಸೆಂಬರ್ 31ರವರೆವಿಗೂ ಈ ಗುರಿ ಸಾಧನೆ ಎಷ್ಟು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) **ಮತ್ತು** ಆ) 2014–15ನೇ ಸಾಲಿನಲ್ಲಿ ಆಯವ್ಯಯದಲ್ಲಿ ವಾಣಿಜ್ಯ, ಅಬಕಾರಿ ಹಾಗೂ ಮುದ್ರಾಂಕದಿಂದ ನಿಗದಿಪಡಿಸಲಾದ ಆದಾಯದ ಗುರಿ ಮತ್ತು ನವೆಂಬರ್ 2014ರ ಅಂತ್ಯದವರೆಗೆ ಸಾಧನೆಯ ವಿವರ ಈ ಕೆಳಕಂಡಂತಿದೆ:

(₹. ಕೋಟಿಗಳಲ್ಲಿ)

ಕ್ರ. ಸಂ.	ತೆರಿಗೆ	**2014–15 ಆಯವ್ಯಯ ಅಂದಾಜು**	**2014–15 (ನವೆಂಬರ್ 2014 ಅಂತ್ಯದವರೆಗೆ)**
1	ವಾಣಿಜ್ಯ	42000	26974
2	ಅಬಕಾರಿ	14430	6947
3	ನೋಂದಣಿ & ಮುದ್ರಾಂಕ	7450	4566
	ಒಟ್ಟು	**63880**	**40488**